**R.W-1**

**<u>ದಿನಾಂಕಃ 29-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**<u>ಮುಂದುವರೆದ ಮುಖ್ಯ ವಿಚಾರಣೆ: 2 ನೇ ಎದುರುದಾರರ ಪರ ವಕೀಲರಿಂದಃ</u>**

ನಿ.ಆರ್-3 : ಅಧಿಕಾರ ಪತ್ರ,

ನಿ.ಆರ್-4 : ವಿಮಾ ಪಾಲಿಸಿ,

ನಿ.ಆರ್-5 : ತನಿಖಾ ವರದಿ (ಅರ್ಜಿದಾರರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.)

ಎಂದು ಗುರುತಿಸಲಾಯಿತು.

2 ನೇ ಎದುರುದಾರರ ವಿರುದ್ಧ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ .

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಪಿ ಬಿ ಜಿ ವಕೀಲರಿಂದಃ</u>**

1. ಪೋಲಿಸರು ಸಲ್ಲಿಸಿದ ದೋಷಾರೋಪಣೆ ಪಟ್ಟಿಯನ್ನು ನಾವು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ನಮ್ಮ ವಿಮೆಗೆ ಒಳಪಟ್ಟ ಮೋಟಾರ್ ಸೈಕಲ್ ಸಂಖ್ಯೆ ಕೆ ಎ 14/EX-0763 ನೇದ್ದರ ಚಾಲಕನಿಗೆ ಅಪಘಾತ ಸಮಯದಲ್ಲಿ ಸೂಕ್ತ ಚಾಲನಾ ಪರವಾನಿಗೆ ಪತ್ರ ಇತ್ತು ಎಂದರೆ ಸರಿ. ಆ ಸಮಯದಲ್ಲಿ ನಾವು ನೀಡಿದ ವಿಮಾ ಪಾಲಸಿ ಸಹ ಚಾಲ್ತಿಯಲ್ಲಿತ್ತು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 3 ಮತ್ತು 4 ನೇ ಪ್ಯಾರಾದಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. MVC No. 916/2023 ರ ಅರ್ಜಿದಾರರಿಗೆ ಅಪಘಾತ ಸಮಯದಲ್ಲಿ ಚಾಲನಾ ಪರವಾನಿಗೆ ಇತ್ತು ಎಂದರೆ ಸರಿಯಲ್ಲ. MVC No. 916/2023 ರ ಅರ್ಜಿದಾರರು ಅಪಘಾತ ಸಮಯದಲ್ಲಿ ಹೆಲ್ಮೆಟ್ ಧರಿಸಿರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಿಆರ್-5 ಯಾವುದೆ ಕಾನೂನಿನ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಅದನ್ನು ನಮ್ಮ

**R.W-1**

ಆಂತರಿಕ ಉದ್ದೇಶಕ್ಕಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ರಾಜಶೇಖರ ವಿ ಹಿರೇಮಠ ರವರನ್ನು ವೈದ್ಯಕೀಯ ದಾಖಲೆಗಳ ಪರಿಶೀಲನೆಗಾಗಿ ನಾವು ನೇಮಕ ಮಾಡಿದ್ದೆವು ಎಂದು ತೋರಿಸಲು ಯಾವುದೆ ದಾಖಲೆ ಹಾಜರು ಪಡಿಸಿರುವುದಿಲ್ಲ. ಸದರಿ ರಾಜಶೇಖರ ಹಿರೇಮಠ ಯಾವುದೆ ಆಸ್ಪತ್ರೆಗೆ ಬೇಟಿ ನೀಡದೆ ದಾಖಲೆಗಳನ್ನು ಪರಿಶೀಲಿಸದೇ ಸುಳ್ಳು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-24 ರ ಅನುಕ್ರಮ ಸಂಖ್ಯೆ 7 ರ ಆಸ್ಪತ್ರೆಯ ಬಿಲ್ ನ ಮೊತ್ತವನ್ನು MVC No. 916/2023 ರ ಅರ್ಜಿದಾರರು ಎ ಟಿ ಎಂ ಕಾರ್ಡನ ಮೂಲಕ ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿಃ 09-05-2023 ರಂದು MVC No. 916/2023 ರ ಅರ್ಜಿದಾರರು ಸದರಿ ಬಿಲ್ಲಿನ ಬಾಬ್ತು ರೂ.3 ಲಕ್ಷ ರೂಪಾಯಿಗಳನ್ನು ಎ ಟಿ ಎಂ ಕಾರ್ಡ ಮೂಲಕ ಆಸ್ಪತ್ರೆಯ ಅಕೌಂಟ್ ಗೆ ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿಃ 13-05-2023 ರಂದು MVC No. 916/2023 ರ ಅರ್ಜಿದಾರರು ಆಸ್ಪತ್ರೆಯಿಂದ ಬಿಡುಗಡೆ ಆಗುವಾಗ ರೂ.80,200/- ರೂಪಾಯಿಗಳನ್ನು ಎ ಟಿ ಎಂ ಕಾರ್ಡ ಮೂಲಕ ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-24 ರ ಅನುಕ್ರಮ ಸಂಖ್ಯೆ 7 ರ ಆಸ್ಪತ್ರೆಯ ಬಿಲ್ಲಿನ ಮೊತ್ತವನ್ನು ಸಂಪೂರ್ಣವಾಗಿ MVC No. 916/2023 ರ ಅರ್ಜಿದಾರರೇ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-24 ರಲ್ಲಿರುವ ಒಟ್ಟು 42 ಮೆಡಿಕಲ್ ಬಿಲ್ಲುಗಳ ಬಾಬ್ತು ಪೂರ್ಣ ಹಣವನ್ನು MVC No. 916/2023 ರ ಅರ್ಜಿದಾರರೇ ತುಂಬಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಕಂಪನಿಯವರು ಆಸ್ಪತ್ರೆಯಲ್ಲಿ ಪರಿಶೀಲನೆ ಮಾಡಿದಾಗ ರೂ.2,90,676/- ರೂಪಾಯಿಗಳನ್ನು MVC No. 916/2023 ರ ಅರ್ಜಿದಾರರು ಕೆಲಸ ಮಾಡುತ್ತಿದ್ದ ಕಂಪನಿಯವರು ಪಾವತಿ ಮಾಡಿರುತ್ತಾರೆ ಎಂದರೆ ಕಂಡು ಬಂದಿರುತ್ತದೆ. ಸದರಿ ಹಣವನ್ನು ಸಹ MVC No. 916/2023 ರ ಅರ್ಜಿದಾರರೆ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಆಸ್ಪತ್ರೆಯವರು MVC No. 916/2023 ರ ಅರ್ಜಿದಾರರು ಹಾಜರು ಪಡಿಸಿದ ಮೆಡಿಕಲ್ ಬಿಲ್ ಗಳು ಸುಳ್ಳು ಸೃಷ್ಠನೆಯ ಬಿಲ್ ಗಳು ಎಂದು ಯಾವುದೆ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ. MVC No. 916/2023 ಮತ್ತು 917/2023 ರ ಅರ್ಜಿದಾರರಿಗೆ ಪರಿಹಾರ ಕೊಡಬೇಕಾದ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಎದುರುದಾರರ ಪರ ವಕೀಲರನ್ನು ಪದೇ–ಪದೇ ಕೂಗಿ ಕರೆಯಿಸಲಾಗಿ, ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

**R.W-1**

<u>**ಮರು ವಿಚಾರಣೆಃ ಏನೂ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.